ಪಿ.ಡಬ್ಲೂಃ 1- ಮನೋಜ್ ಕುಮಾರ್ ರೆಡ್ಡಿ ಬಿನ್.ಆಂಜನೇಯ ರೆಡ್ಡಿ

ದಿನಾಂಕಃ 05/03/2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು 1 ರಿಂದ 4, 6 ಮತ್ತು 7 ನೇ ಪ್ರತಿವಾದಿಯರ ಪರವಾಗಿ ಶ್ರೀ ಎನ್.ಎಸ್. ವಕೀಲರಿಂದ**

1. ನನ್ನ ಜನ್ಮ ದಿನಾಂಕ 31.05.1989 ಅಗಿರುತ್ತದೆ. 2 ನೇ ವಾದಿಯ ಜನ್ಮ ದಿನಾಂಕ 10.07.1991 ಆಗಿರುತ್ತದೆ. ನಮ್ಮ ತಂದೆ ತಾಯಿಯ ಮದುವೆಯು 1989 ಆಗಿರುತ್ತದೆ. ಮದುವೆಯಾದ ಸಮಯದಿಂದ ನಮ್ಮ ತಂದೆ ತಾಯಿಯು ಜೊತೆಯಲ್ಲಿ ಇದ್ದು ಅವರು ಪ್ರಾರಂಭದಲ್ಲಿ ಬಲುವನಹಳ್ಳಿ ಗ್ರಾಮದಲ್ಲಿ 1991 ರವರೆಗೆ ವಾಸವಾಗಿದ್ದು ನಂತರದಿಂದ ಶಿರಸಿಯಲ್ಲಿ ವಾಸವಾಗಿದ್ದರು. ನಮ್ಮ ತಾಯಿಯು ದಿನಾಂಕ 18.01.1992 ರಂದು ಮರಣ ಹೊಂದಿರುತ್ತಾರೆ. ನನ್ನ ಮತ್ತು 2 ನೇ ವಾದಿಯ ಪಾಲನೆ ಪೋಷಣೆಯನ್ನು ನಮ್ಮ ತಂದೆ ಮತ್ತು ನಮ್ಮ ತಾತನಾದ ಮುನಿಸ್ವಾಮಿರೆಡ್ಡಿ ರವರು ಮಾಡಿರುತ್ತಾರೆ. ನಮ್ಮ ತಂದೆ ಮತ್ತು ತಾಯಿಯ ಮದುವೆಯು ಅಂತರ್ಜಾತಿ ವಿವಾಹವಾಗಿತ್ತು ಎಂದರೆ ಸರಿ. ಆ ಕಾರಣದಿಂದ ನಮ್ಮ ತಂದೆ ಹಾಗೂ ಅವರ ತಂದೆಯ ಮಧ್ಯ ಭಿನ್ನಾಭಿಪ್ರಾಯಗಳು ಇದ್ದವು ಎಂದರೆ ಸರಿ. ನನ್ನ ತಂದೆ ತಾಯಿಯು ಮದುವೆಯಾದ ನಂತರ 1991 ರವರೆಗೆ ಬಲುವನಹಳ್ಳಿಯಲ್ಲಿ ವಾಸವಾಗಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ. ನಾನು ನಮ್ಮ ತಂದೆಯ ಜೊತೆ ಶಿರಸಿಯಲ್ಲಿ ವಾಸವಾಗಿದ್ದೆ ಮತ್ತು 2 ನೇ ವಾದಿಯು 2 ನೇ ತರಗತಿಯಲ್ಲಿ ಓದುವರೆವಿಗೂ ನಮ್ಮ ಅಜ್ಜಿ ಅಜ್ಜ ಮುನಿಸ್ವಾಮಿರೆಡ್ಡಿ ರವರ ಜೊತೆ ವಾಸವಾಗಿದ್ದು ನಂತರ ಅವರು ಸಹ ಶಿರಸಿಗೆ ಬಂದಿರುತ್ತಾರೆ. ಈಗ ನಾನು, 2 ನೇ ವಾದಿ ಮತ್ತು ನಮ್ಮ ತಂದೆಯು ಶಿರಸಿಯ ಗಿಡಮಾವಿನಕಟ್ಟೆ ಗ್ರಾಮದಲ್ಲಿ ವಾಸವಾಗಿರುತ್ತೇವೆ ಆದರೆ ನಾನು ಪ್ರತ್ಯೇಕ ಮನೆ ಮಾಡಿಕೊಂಡು ವಾಸವಾಗಿರುತ್ತೇನೆ ಮತ್ತು ನಮ್ಮ ತಂದೆ ಹಾಗೂ 2 ನೇ ವಾದಿಯು ಜೊತೆಯಲ್ಲಿ ಇನ್ನೊಂದು ಮನೆಯಲ್ಲಿ ವಾಸವಾಗಿರುತ್ತಾರೆ. ಈಗ ಸುಮಾರು 6 ವರ್ಷಗಳಿಂದ ನಾನು ನಮ್ಮ ತಂದೆ ಮತ್ತು 2 ನೇ ವಾದಿಯಿಂದ ಪ್ರತ್ಯೇಕವಾಗಿ ವಾಸವಾಗಿರುತ್ತೇನೆ ಮತ್ತು ಅದಕ್ಕೂ ಮುಂಚೇ ನಾವೆಲ್ಲರೂ ಒಟ್ಟಿಗೆ ವಾಸವಾಗಿರುತ್ತೇವೆ. ನಾನು ಪ್ರತ್ಯೇಕವಾಗಿ ವಾಸವಾಗಿರುತ್ತೇನೆ ಎಂದು ತೋರಿಸಲು ನನ್ನ ಹತ್ತಿರ ದಾಖಲೆಗಳು ಇರುತ್ತವೆ. ನನಗೆ ಮದುವೆಯಾಗಿದ್ದು ನಾನು, ನನ್ನ ಹೆಂಡತಿ ಮತ್ತು ಮಗ ಒಟ್ಟಿಗೆ ಪ್ರತ್ಯೇಕ ಮನೆಯಲ್ಲಿ ವಾಸವಾಗಿರುತ್ತೇವೆ. 2 ನೇ ವಾದಿಯು 2 ನೇ ತರಗತಿಯಲ್ಲಿ ಓದುವರೆವಿಗೂ ನಮ್ಮ ಅಜ್ಜನ ಜೊತೆ ವಾಸವಾಗಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ ಆದರೆ ನಿಪಿ 146 ಮತ್ತು 147 ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ. ನಾವು

ಹಾಜರುಪಡಿಸಿರುವ ನಿಪಿ 146 ಮತ್ತು 147 ದಾಖಲೆಗಳು ಸುಳ್ಳಾಗಿರುತ್ತವೆ ಮತ್ತು ನಾವು ಅವುಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

2. 1991 ರಿಂದ ನಾನಾಗಲೀ ಅಥವಾ ನಮ್ಮ ತಂದೆ ಮತ್ತು 2 ನೇ ವಾದಿಯಾಗಲೀ ಬಲುವನಹಳ್ಳಿಯಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿ ಆದರೆ ನಾವು ಬಂದು ಹೋಗುತ್ತೇವೆ ಮತ್ತು ಅದು ಅಲ್ಲದೇ ಮಳೆಗಾಲದಲ್ಲಿ ನಮ್ಮ ತಂದೆಯು ಬಲುವನಹಳ್ಳಿ ಗ್ರಾಮದಲ್ಲಿ ಹಳೆ ಮನೆಯಲ್ಲಿ ವಾಸವಾಗಿ ಜಮೀನಿನಲ್ಲಿ ಕೆಲಸ ಮಾಡುತ್ತಾರೆ. ನನ್ನ, ನಮ್ಮ ತಂದೆ ಮತ್ತು 2 ನೇ ವಾದಿಯ ಹೆಸರುಗಳಲ್ಲಿ ಬಲುವನಹಳ್ಳಿ ಗ್ರಾಮದ ವಿಳಾಸ ಇರುವ ಯಾವುದೇ ಗುರುತಿನ ಚೀಟಿಗಳು ಇರುವುದಿಲ್ಲ. ಅದೇ ರೀತಿ ಬಲುವನಹಳ್ಳಿ ಗ್ರಾಮದಲ್ಲಿ ನಮ್ಮ ತಂದೆ ಹೆಸರಿನಲ್ಲಿ ಯಾವುದೇ ಮನೆ ಇರುವುದಿಲ್ಲ ಆದರೆ ನಮ್ಮ ತಾತ ಮುನಿಸ್ವಾಮಿರೆಡ್ಡಿ ರವರ ಹೆಸರಿನಲ್ಲಿ ಇರುತ್ತದೆ. ಮಳೆಗಾಲದಲ್ಲಿ ನಮ್ಮ ತಂದೆಯು ಬಲುವನಹಳ್ಳಿ ಗ್ರಾಮದಲ್ಲಿ ಹಳೆ ಮನೆಯಲ್ಲಿ ವಾಸವಾಗಿ ಜಮೀನಿನಲ್ಲಿ ಕೆಲಸ ಮಾಡುತ್ತಾರೆ ಎಂದು ನಾವು ನಮ್ಮ ವಾದಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

3. ನಮ್ಮ ಕುಟುಂಬಕ್ಕೆ ಜಮೀನುಗಳನ್ನು ಹೊರತುಪಡಿಸಿ ಬಲುವನಹಳ್ಳಿ ಗ್ರಾಮದಲ್ಲಿ ಕೇವಲ ದಾವಾ ಐಟಂ ನಂಬರ್ 18 ಮನೆ ಇರುತ್ತದೆ ಮತ್ತು ಸ್ವಲ್ಪ ದೂರದಲ್ಲಿ ಖಾಲಿ ಜಾಗ ಇರುತ್ತದೆ. ಸದರಿ ಮನೆಯ ಒಂದು ಭಾಗ ಈಗ ಖಾಲಿ ಇದ್ದು ಇನ್ನೊಂದು ಭಾಗದಲ್ಲಿ ಸಂಪತ್ ಕುಮಾರ್ ಎಂಬುವವರು ಬಾಡಿಗೆಯಿಂದ ವಾಸವಾಗಿರುತ್ತಾರೆ. ನಮ್ಮ ತಂದೆಯು ಮಳೆಗಾಲದಲ್ಲಿ ಬಂದು ಸದರಿ ಖಾಲಿ ಇರುವ ಮನೆಯ ಭಾಗದಲ್ಲಿ ವಾಸವಾಗುತ್ತಿದ್ದರು ಆದರೆ ಈ ದಾವೆ ದಾಖಲಾದ ಸಮಯದಿಂದ 7 ನೇ ಪ್ರತಿವಾದಿಯು ಅದಕ್ಕೆ ಬೀಗ ಹಾಕಿ ಮುಚ್ಚಿ ಇಟ್ಟಿರುತ್ತಾರೆ. ದಾವಾ ಐಟಂ ನಂಬರ್ 18 ರ ಖಾತೆಯು 7 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸದರಿ ಮನೆಯಲ್ಲಿ 7 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ವಾಸವಾಗಿದ್ದು ನಾವು ಯಾವತ್ತೂ ಬಲುವನಹಳ್ಳಿ ಗ್ರಾಮಕ್ಕೆ ಬಂದು ಸದರಿ ಮನೆಯಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯು ಅಂತರ್ಜಾತಿ ವಿವಾಹ ಮಾಡಿಕೊಂಡು ಬಲುವನಹಳ್ಳಿ ಗ್ರಾಮವನ್ನು ಬಿಟ್ಟು ಹೋದವರು ಪುನಃ ಬಲುವನಹಳ್ಳಿ ಗ್ರಾಮಕ್ಕೆ ಬಂದು ಯಾವತ್ತೂ ವಾಸ ಮಾಡಿರುವುದಿಲ್ಲ ಮತ್ತು ಶಿರಸಿಯಲ್ಲಿಯೇ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ 2 ನೇ ವಾದಿಯು ಯಾವತ್ತೂ ನಮ್ಮ ತಾತ ಮುನಿಸ್ವಾಮಿರೆಡ್ಡಿ ರವರ ಜೊತೆ ವಾಸವಾಗಿರುವುದಿಲ್ಲ ಮತ್ತು ಅವರು 2 ನೇ ವಾದಿಯನ್ನು ಓದಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ನಮ್ಮ ತಂದೆ ಮತ್ತು ನಾವು ವಾದಿಯರ ಮಧ್ಯ ಭಿನ್ನಾಭಿಪ್ರಾಯಗಳು ಇರುತ್ತವೆ. ದಾವಾ ಸ್ವತ್ತುಗಳ ವಿಚಾರವಾಗಿ ಮತ್ತು ನಮ್ಮ ತಂದೆಯು ನಮ್ಮ ಚಿಕ್ಕಪ್ಪಂದಿರುಗಳಿಗೆ ಎಲ್ಲಾ ಅನುಕೂಲಗಳನ್ನು ಮಾಡುತ್ತಿರುವ ಕಾರಣ ನಮ್ಮ ಮತ್ತು ನಮ್ಮ ತಂದೆಯ ಮಧ್ಯ ಭಿನ್ನಾಭಿಪ್ರಾಯಗಳು ಇರುತ್ತವೆ. ನಮ್ಮ ತಂದೆಯು ದಾವಾ ಜಮೀನುಗಳಲ್ಲಿ ವ್ಯವಸಾಯ ಮಾಡಿ ಎಲ್ಲಾ ಲಾಭವನ್ನು 7 ನೇ ಪ್ರತಿವಾದಿಗೆ ಕೊಡುವ ಮೂಲಕ ಅವರಿಗೆ ಅನುಕೂಲ ಮಾಡುತ್ತಿದ್ದರು ಮತ್ತು ಆ ಕಾರಣಗಳಿಂದ ನಮ್ಮ ಮಧ್ಯ ಭಿನ್ನಾಭಿಪ್ರಾಯಗಳು ಇರುತ್ತವೆ. ನಾವು ಈ ದಾವೆ ದಾಖಲಿಸುವಾಗ ನಮ್ಮ ತಂದೆ ಅಂದರೆ 5 ನೇ ಪ್ರತಿವಾದಿಯು ಅಸಲು ದಾವೆ ನಂಬರ್ 122/2021 ದಾವೆಯನ್ನು ದಾಖಲಿಸಿರುತ್ತಾರೆ ಎಂಬ ವಿಚಾರ ನಮಗೆ ಗೊತ್ತಿತ್ತು. ನಮ್ಮ ತಂದೆಯು ದಾವಾ ಸ್ವತ್ತುಗಳಲ್ಲಿ ವಿಭಾಗವಾಗಿ ಅವರ ಹಿಸ್ಸೆಗೆ ಸ್ವತ್ತುಗಳು ಬರಬೇಕು ಎಂದು ಹೇಳಿ ಸದರಿ ಅಸಲು ದಾವೆ 122/2021 ನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಈ ದಾವೆಯಲ್ಲಿರುವ ಎಲ್ಲಾ ಸ್ವತ್ತುಗಳು ಅಸಲು ದಾವೆ ನಂಬರ್ 122/2021 ರಲ್ಲಿ ಇರುತ್ತವೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನಮ್ಮ ತಂದೆಗೆ ಬರುವ ಭಾಗದಲ್ಲಿ ನನಗೆ ಮತ್ತು 2 ನೇ ವಾದಿಗೂ ಸಹ ಭಾಗ ಬರಬೇಕು ಎಂದು ಹೇಳಿ ನಾನಾಗಲೀ ಅಥವಾ 2 ನೇ ವಾದಿಯಾಗಲೀ ಅಸಲು ದಾವೆ ನಂಬರ್ 122/2021 ರಲ್ಲಿ ಅರ್ಜಿ ಸಲ್ಲಿಸಿ ಪಕ್ಷಗಾರರಾಗಲು ಪ್ರಯತ್ನಿಸಿಲ್ಲ. ಅಸಲು ದಾವೆ ನಂಬರ್ 122/2021 ನ್ನು ದಾಖಲಿಸಿದ ಬಗ್ಗೆ 5 ನೇ ಪ್ರತಿವಾದಿಯು 2 ನೇ ವಾದಿಗೆ ಹೇಳಿದ್ದು 2 ನೇ ವಾದಿಯು ಸದರಿ ವಿಚಾರವನ್ನು ನನಗೆ ಹೇಳಿದ್ದರು. 5 ನೇ ಪ್ರತಿವಾದಿಯು ಈಗಾಗಲೇ ದಾವಾ ಸ್ವತ್ತುಗಳಲ್ಲಿ ಭಾಗ ಕೇಳಿ ಅಸಲು ದಾವೆ ನಂಬರ್ 122/2021 ನ್ನು ದಾಖಲಿಸಿರುವುದರಿಂದ ಮತ್ತು ಅದು ವಿಚಾರಣೆಯಲ್ಲಿ ಇರುವುದರಿಂದ ನನಗೆ ಮತ್ತು 2 ನೇ ವಾದಿಗೆ ಈ ದಾವೆ ದಾಖಲಿಸಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

5. ದಾವಾ ಸ್ವತ್ತುಗಳಲ್ಲಿ 5 ನೇ ಪ್ರತಿವಾದಿಗೆ ಇರುವ 1/5 ನೇ ಭಾಗಕ್ಕೆ ಸಂಬಂಧಿಸಿ 5 ನೇ ಪ್ರತಿವಾದಿ ಮತ್ತು 7 ನೇ ಪ್ರತಿವಾದಿ ಹಾಗೂ ವೆಂಕಟರೆಡ್ಡಿ ರವರ ಮಧ್ಯ ಅಸಲು ದಾವಾ ನಂಬರ್ 760/1991 ದಾಖಲಾಗಿತ್ತು ಎಂದರೆ ಸರಿ. ನಾವು ಸದರಿ ದಾವೆಯ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದು ನಾನು ಅವುಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತುಗಳಲ್ಲಿ 5 ನೇ ಪ್ರತಿವಾದಿಗೆ ಇರುವ 1/5 ನೇ ಭಾಗವನ್ನು 5 ನೇ ಪ್ರತಿವಾದಿಯ ತಮಗೆ ಮಾರಾಟ ಮಾಡಲು ಒಪ್ಪಿರುತ್ತಾರೆ ಎಂದು ಹೇಳಿ 7 ನೇ ಪ್ರತಿವಾದಿ ಹಾಗೂ ವೆಂಕಟರೆಡ್ಡಿ ರವರು ಸದರಿ ದಾವೆಯನ್ನು ದಾಖಲಿಸಿದ್ದರು ಎಂದರೆ ಸರಿ. ನನಗೆ ಜ್ಞಾನ ಬಂದ ನಂತರ ಸದರಿ ಅಸಲು

ದಾವಾ ನಂಬರ್ 760/1991 ವಿಚಾರಣೆಯಲ್ಲಿರುತ್ತದೆ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. 1991 ರಲ್ಲಿ ನಮ್ಮ ತಂದೆಯು ನಿಪಿ 3 ರಲ್ಲಿ ನಮೂದಿಸಿರುವ ವಿಳಾಸದಲ್ಲಿ ವಾಸವಾಗಿದ್ದರು ಮತ್ತು ಶಿರಸಿಯ ಪೈ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸದರಿ ವಿಳಾಸದಿಂದ ಬಂದು 5 ನೇ ಪ್ರತಿವಾದಿಯು ಅಸಲು ದಾವಾ ನಂಬರ್ 760/1991 ರಲ್ಲಿ ಹಾಜರಾಗುತ್ತಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಮ್ಮ ತಂದೆಯ ವಿಚಾರಣೆಯಾಗಿ ನಂತರ ಅದು ನಮ್ಮ ತಂದೆಯ ವಿರುದ್ಧ ಡಿಕ್ರಿ ಆಗಿರುತ್ತದೆ ಎಂದರೆ ಸರಿ ಆದರೆ ನಮ್ಮ ತಂದೆಯು ಯಾವುದೇ ಕಾರಾರು ಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ನಿಪಿ 8 ಮತ್ತು 9 ದಾಖಲೆಯ ಆಧಾರದ ಮೇಲೆ ಅಸಲು ದಾವಾ ನಂಬರ್ 760/1991 ನ್ನು ದಾಖಲಿಸಲಾಗಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ಆದ ತೀರ್ಪು ತಪ್ಪಾಗಿರುತ್ತದೆ ಎಂದು ಹೇಳಿ ನಮ್ಮ ತಂದೆಯು ಆರ್.ಎ ನಂಬರ್ 75/2000 ನ್ನು ದಾಖಲಿಸಿದ್ದರು ಎಂದರೆ ಸರಿ. ನಂತರ ಸದರಿ ಅಪೀಲು ವಜಾಗೊಂಡಿರುತ್ತದೆ ಎಂದರೆ ಸರಿ. ನನಗೆ ಪ್ರಾಪ್ತ ವಯಸ್ಸು ಬಂದ ನಂತರ ಸದರಿ ದಾವೆ ಮತ್ತು ಅಪೀಲು ನಡೆದ ಬಗ್ಗೆ ನನಗೆ ಗೊತ್ತಾಗಿತ್ತು. ಹೀಗೆ ನನಗೆ ಸದರಿ ವಿಚಾರ ಗೊತ್ತಾದಾಗ ನಾನು, 2 ನೇ ವಾದಿ ಮತ್ತು ನಮ್ಮ ತಂದೆ ಜೊತೆಯಲ್ಲಿ ವಾಸವಾಗಿದ್ದೆವು ಎಂದರೆ ಸರಿ. ನನಗೆ ಮತ್ತು 2 ನೇ ವಾದಿಗೆ ಪ್ರಾಪ್ತ ವಯಸ್ಸು ಬಂದ ನಂತರ ನಾವು ವೆಂಕಟರೆಡ್ಡಿ ಅಥವಾ 7 ನೇ ಪ್ರತಿವಾದಿಯ ವಿರುದ್ಧ ನಿಪಿ 8 ಮತ್ತು 9 ಕರಾರುಪತ್ರ ಸುಳ್ಳಾಗಿರುತ್ತದೆ ಮತ್ತು ಅದು ನಮ್ಮ ಮೇಲೆ ಬಂಧನಾಕಾರಿ ಆಗುವುದಿಲ್ಲ ಎಂದು ಹೇಳಿ ನಾನಾಗಲೀ ಅಥವಾ 2 ನೇ ವಾದಿಯಾಗಲೀ ಯಾವುದೇ ದಾವೆ ಸಲ್ಲಿಸಿಲ್ಲ ಮತ್ತು ನೋಟಿಸ್ ಕಳುಹಿಸಿರುವುದಿಲ್ಲ ಎಂದರೆ ಸರಿ. ನನಗೆ ಮತ್ತು 2 ನೇ ವಾದಿಗೆ ಪ್ರಾಪ್ತ ವಯಸ್ಸು ಬರುವವರೆಗೂ ನಮ್ಮ ತಂದೆಯೇ ನಮ್ಮನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

6. 2012 ವರೆಗೆ ನಾನು ನಮ್ಮ ತಂದೆಯ ಜೊತೆ ವಾಸವಾಗಿದ್ದು ನಂತರ ನಾನು ಕೆಲಸಕ್ಕಾಗಿ ದಾಂಡೇಲಿ ಹಾಗೂ ಇತರೇ ಕಡೆ ಹೋಗಿದ್ದು ಅಂದಿನಿಂದ ನಾನು ನಮ್ಮ ತಂದೆಯ ಜೊತೆ ವಾಸವಾಗಿರುವುದಿಲ್ಲ. ಆ ಸಮಯದಲ್ಲಿ ನಮ್ಮ ಮಧ್ಯ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳು ಇದ್ದವು ಆದರೆ ಯಾವುದೇ ದೊಡ್ಡ ಗಲಾಟೆಗಳು ಇರಲಿಲ್ಲ. ನಮ್ಮ ಮತ್ತು ನಮ್ಮ ತಂದೆಯ ಮಧ್ಯ ಯಾವತ್ತೂ ಯಾವುದೇ ರೀತಿಯ ಭಿನ್ನಾಭಿಪ್ರಾಯಗಳು ಇರಲಿಲ್ಲ ಮತ್ತು ನಾವು ಮೊದಲಿನಿಂದ ಇಲ್ಲಿಯವರೆಗೂ ಜೊತೆಯಲ್ಲಿ ಗಿಡಮಾವಿನಕಟ್ಟೆಯಲ್ಲಿ ಒಂದೇ ಮನೆಯಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿಯಲ್ಲ. ಆರ್.ಎ ನಂಬರ್ 75/2000 ಮುಗಿದ ನಂತರ 7 ನೇ ಪ್ರತಿವಾದಿ ಮತ್ತು ವೆಂಕಟರೆಡ್ಡಿರವರ ಪರವಾಗಿ 2 ರಿಂದ 4 ನೇ ಪ್ರತಿವಾದಿಯರು ಕ್ರಯಪತ್ರವನ್ನು ಮಾಡಿಕೊಳ್ಳಲು

ನಮ್ಮ ತಂದೆಯ ವಿರುದ್ಧ ಜಾರಿ ಅರ್ಜಿ ಸಂಖ್ಯೆ 194/2011 ದಾಖಲಿಸ್ದಿದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಡಿಕ್ರಿಯ ಪ್ರಕಾರ 2 ರಿಂದ 4 ಮತ್ತು 7 ನೇ ಪ್ರತಿವಾದಿಯರ ಹೆಸರಿನಲ್ಲಿ ನ್ಯಾಯಾಲಯದ ಮೂಲಕ ದಿನಾಂಕ 04.10.2017 ರಂದು ನೋಂದಾಯಿತ ಕ್ರಯಪತ್ರ ಆಗಿರುತ್ತದೆ ಎಂದರೆ ಸರಿ. ಸದರಿ ಕ್ರಯಪತ್ರದ ಆಧಾರದ ಮೇಲೆ ನಿಪಿ 128 ರಿಂದ 139 ದಾಖಲೆಗಳ ಪ್ರಕಾರ ಸ್ವತ್ತುಗಳ ಪಹಣಿಗಳು 2 ರಿಂದ 4 ಮತ್ತು 7 ನೇ ಪ್ರತಿವಾದಿಯರ ಹೆಸರಿನಲ್ಲಿ ಬದಲಾವಣೆಯಾಗಿರುತ್ತವೆ ಎಂದರೆ ಸರಿ.

7. ಈ ಮಧ್ಯ ನಮ್ಮ ತಂದೆಯು ದಾವಾ ಸ್ವತ್ತುಗಳಲ್ಲಿ ಭಾಗ ಕೇಳಿ ಅಸಲು ದಾವಾ ನಂಬರ್ 66/2003 ನ್ನು ದಾಖಲಿಸಿದ್ದರು ಎಂದರೆ ಸರಿ. ಆಗ ನಾನು, ನಮ್ಮ ತಂದೆ ಮತ್ತು 2 ನೇ ವಾದಿಯು ಜೊತೆಯಲ್ಲಿ ವಾಸವಾಗಿದ್ದೆವು ಎಂದರೆ ಸರಿ. ನಂತರ ನಮ್ಮ ತಂದೆಯು ವಿಚಾರಣೆಗೆ ಹಾಜರಾಗಿಲ್ಲ ಎಂಬ ಕಾರಣಕ್ಕಾಗಿ ದಿನಾಂಕ 20.03.2007 ರಂದು ಅಸಲು ದಾವಾ ನಂಬರ್ 66/2003 ರಂದು ವಜಾಗೊಂಡಿರುತ್ತದೆ ಎಂದರೆ ಸರಿ ಕಾರಣ ಆ ಸಮಯದಲ್ಲಿ ನನಗೆ ರಸ್ತೆ ಅಪಘಾತವಾಗಿದ್ದು ನಮ್ಮ ತಂದೆಯು ನನ್ನನ್ನು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನನಗೆ ಅಪಘಾತವಾಗಿತ್ತು ಎಂದು ಹೇಳಿದ ಸಮಯದಲ್ಲಿ ನನಗೆ ಅಸಲು ದಾವಾ ನಂಬರ್ 66/2003 ರ ವಿಚಾರ ಗೊತ್ತಿತ್ತು ಎಂದರೆ ಸರಿಯಲ್ಲ ಆದರೆ ನಾನು ನಂತರ ತಿಳಿದುಕೊಂಡಿರುತ್ತೇನೆ. ಸದರಿ ದಾವೆಯಲ್ಲಿ ಮೇಲೆ ಹೇಳಿದ ಕಾರಣದಿಂದ ನಮ್ಮ ತಂದೆಗೆ ಹಾಜರಾಗಲು ಆಗಲಿಲ್ಲ ಮತ್ತು ದಾವೆಯನ್ನು ಪುನರ್ ಸ್ಥಾಪನೆ ಮಾಡಬೇಕು ಎಂದು ಹೇಳಿ ನಮ್ಮ ತಂದೆಯು ನ್ಯಾಯಾಲಯಕ್ಕೆ ಮಿಸ್ ಅರ್ಜಿ ಸಲ್ಲಿಸಿದ್ದಾರೆಯೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

8. ಈ ದಾವೆಯಲ್ಲಿ 7 ನೇ ಪ್ರತಿವಾದಿ ದಾಖಲಿಸಿರುವ ಲಿಖಿತ ಹೇಳಿಕೆಯನ್ನು ನಾನು ತಿಳಿದುಕೊಂಡಿರುತ್ತೇನೆ. ಇಂದು ನ್ಯಾಯಾಲಯಕ್ಕೆ ನಮ್ಮ ತಂದೆ ಬಂದಿರುತ್ತಾರೆ ಎಂದರೆ ಸರಿ.ಅವರು ನನಗೆ ಜೊತೆಯಲ್ಲಿಯೇ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಯು ಮದುವೆ ಮಾಡಿಕೊಂಡು ಊರು ಬಿಟ್ಟು ಹೋಗುವಾಗ ದಾವಾ ಸ್ವತ್ತುಗಳಲ್ಲಿ ಹಕ್ಕು ಬೇಡ ಎಂದು ಹೇಳಿ ತಮ್ಮ ಹಿಸ್ಸೆಯನ್ನು 7 ನೇ ಪ್ರತಿವಾದಿ ಮತ್ತು ವೆಂಕಟರೆಡ್ಡಿ ರವರಿಗೆ ಮಾರಾಟ ಮಾಡಲು ಒಪ್ಪಿ ನಿಪಿ 8 ಮತ್ತು 9 ಕರಾರು ಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ನಂತರ ಸದರಿ ಕರಾರು ಪತ್ರದ ಮೇಲೆ ದಾವೆ ನಡೆದು 2 ರಿಂದ 4 ಮತ್ತು 7 ನೇ ಪ್ರತಿವಾದಿಯ ಹೆಸರಿಗೆ ಕಾನೂನು ಬದ್ಧವಾಗಿ ಕ್ರಯಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ಹೀಗೆ ನಮ್ಮ ತಂದೆಯು ಈಗಾಗಲೇ ದಾವಾ

ಸ್ವತ್ತುಗಳಲ್ಲಿ ಇದ್ದ ತಮ್ಮ ಹಿಸ್ಸೆಯನ್ನು 7 ನೇ ಪ್ರತಿವಾದಿ ಮತ್ತು ವೆಂಕಟರೆಡ್ಡಿ ರವರಿಗೆ ಮಾರಾಟ ಮಾಡಿರುವುದರಿಂದ ಅವರಿಗಾಗಲೀ ಅಥವಾ ನಾವು ವಾದಿಯರಿಗಾಗಲೀ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಮೊದಲು ನಡೆದ ಎಲ್ಲಾ ಪ್ರಕರಣಗಳ ಬಗ್ಗೆ ನನಗೆ ಮತ್ತು 2 ನೇ ವಾದಿಗೆ ಚೆನ್ನಾಗಿ ಗೊತ್ತಿದ್ದರೂ ಸಹ ಈಗ ದಾವಾ ಸ್ವತ್ತುಗಳ ಪಹಣಿಗಳು 2 ರಿಂದ 4 ಮತ್ತು 7 ನೇ ಪ್ರತಿವಾದಿಯರ ಹೆಸರಿಗೆ ಬದಲಾವಣೆಯಾಗಿರುವುದರಿಂದ ನಾವು ಮತ್ತು ನಮ್ಮ ತಂದೆ ಶಾಮಿಲಾಗಿ ಈ ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಈ ದಾವೆ ದಾಖಲಿಸಲು ಮತ್ತು ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಕೇಳಲು ನಮಗೆ ಯಾವುದೇ ಹಕ್ಕು ಇರುವುದಿಲ್ಲ ಮತ್ತು ನಾವು ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ನಮ್ಮ ಅಜ್ಜನ ಸ್ವತ್ತುಗಳಲ್ಲಿ ನಮ್ಮ ಹಕ್ಕನ್ನು ಕೇಳಿ ದಾವೆ ದಾಖಲಸಿರುತ್ತೇವೆ ಹೊರತು ಬೇರೆ ಯಾವುದೇ ಉದ್ದೇಶ ಇರುವುದಿಲ್ಲ. ನಮ್ಮ ಅಜ್ಜನ ಸ್ವತ್ತುಗಳಲ್ಲಿ ನಮ್ಮ ತಂದೆಗೆ ಇರುವ 1/5 ನೇ ಭಾಗದಲ್ಲಿ ನಮಗೆ ಹಕ್ಕು ಇರುತ್ತದೆ ಎಂದು ನಾವು ಕೇಳುತ್ತಿದ್ದೇವೆ ಎಂದರೆ ಸರಿ. ಸದರಿ 1/5 ನೇ ಭಾಗವನ್ನು ನಮ್ಮ ತಂದೆಯು ಈಗಾಗಲೇ ಮಾರಾಟ ಮಾಡಿರುವುದರಿಂದ ಅದರಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಪ್ರಾಪ್ತ ವಯಸ್ಸು ಬಂದ ನಂತರ ಮೂರು ವರ್ಷಗಳ ಅವದಿಯಲ್ಲಿ ನಾವು ಈ ದಾವೆ ದಾಖಲಿಸದೇ ಇರುವುದರಿಂದ ದಾವೆಯು ಕಾಲ ವಿಳಂಭದಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಿಪಿ 8 ಮತ್ತು 9 ದಾಖಲೆಗಳು ನಮ್ಮ ಮೇಲೆ ಬಂಧನಕಾರಿ ಆಗುತ್ತವೆ ಎಂದರೆ ಸರಿಯಲ್ಲ.

9. ನಿಪಿ 143 ರಿಂದ 145 ಪತ್ರಗಳು ನಮ್ಮ ತಂದೆಯ ಹತ್ತಿರ ಇದ್ದು ನಾನು ಅವುಗಳನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಪತ್ರಗಳನ್ನು ನಮ್ಮ ದೊಡ್ಡಪ್ಪನಾದ ವೆಂಕಟರೆಡ್ಡಿ ಮತ್ತು ನಮ್ಮ ಮಾವನಾದ ಸೋಮಶೇಖರ್ ಹಾಗೂ ಅವರ ತಂದೆಯವರಾದ ಅಮರಪ್ಪ ರವರು ಬರೆದಿರುತ್ತಾರೆ. ನಿಪಿ 143 ರಲ್ಲಿ ವೆಂಕಟರೆಡ್ಡಿ ರವರ ಹೆಸರು ಅಥವಾ ಸಹಿ ಇರುವುದಿಲ್ಲ ಎಂದರೆ ಸರಿ ಆದರೆ ಸದರಿ ಪತ್ರವನ್ನು ಅವರು ನಮ್ಮ ತಂದೆಗೆ ಇಂತಿ ನಿನ್ನ ಅಣ್ಣ ಎಂದು ಬರೆದಿರುತ್ತಾರೆ. ನಾನು ಸದರಿ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಪತ್ರದಲ್ಲಿ ವೆಂಕಟರೆಡ್ಡಿ ರವರು ನಮ್ಮ ತಂದೆಯ ಹತ್ತಿರ ಕ್ರಯಪತ್ರ ಬರೆದುಕೊಡಿ ಎಂದು ಕೇಳಿಕೊಂಡಿರುತ್ತಾರೆ. ಸದರಿ ಪತ್ರವನ್ನು ವೆಂಕಟರೆಡ್ಡಿ ರವರು ಯಾವತ್ತೂ ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ 144 ಪತ್ರವನ್ನು ವಕೀಲರಾದ ನಾರಾಯಣಹೆಗಡೆ ರವರು ಬರೆದಿರುತ್ತಾರೆ. ಸದರಿ ಪತ್ರದಲ್ಲಿ ವಕೀಲರು ತಾವು ವಿರಾಜಪೇಟೆಯಲ್ಲಿ ವಾಸವಾಗಿರುವುದಿಲ್ಲ ಮತ್ತು ನಿಮ್ಮ ಪ್ರಕರಣಗಳನ್ನು

ನೀವೇ ನೋಡಿಕೊಳ್ಳಿ ಎಂದು ಬರೆದಿರುತ್ತಾರೆ. ನಿಪಿ 145 ಪತ್ರದಲ್ಲಿ ಅದನ್ನು ಕಳುಹಿಸುವವರು ರೆಡ್ಡಿ ಶಿರಸಿ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಪತ್ರದಲ್ಲಿ ಅದನ್ನು ಸೋಮಶೇಖರ್ ರವರು ಕಳುಹಿಸಿರುತ್ತಾರೆ ಎಂದು ಗೊತ್ತಾಗುತ್ತದೆ ಆದರೆ ಅದು ಗೊತ್ತಾಗಬಾರದು ಎಂದು ಹೇಳಿ ಅವರು ಕಳುಹಿಸುವವರು ಜಾಗದಲ್ಲಿ ರೆಡ್ಡಿ ಶಿರಸಿ ಎಂದು ಬರೆದಿರುತ್ತಾರೆ ಎಂದು ನುಡಿಯುತ್ತಾರೆ.

10. ನಿಪಿ 8 ಮತ್ತು 9 ಕರಾರು ಪತ್ರವನ್ನು ವೆಂಕಟರೆಡ್ಡಿ ಮತ್ತು 7 ನೇ ಪ್ರತಿವಾದಿಯು ಸೃಷ್ಟಿಸಿರುತ್ತಾರೆ ಎಂದು ಹೇಳಿ ನಮ್ಮ ತಂದೆಯು ಯಾವುದೇ ಅಪರಾಧಿಕ ಪ್ರಕರಣ ದಾಖಲಿಸಿರುವುದಿಲ್ಲ ಆದರೆ ನಮ್ಮ ತಂದೆ ತಾಯಿಯು ಬೇತಮಂಗಲ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿರುತ್ತಾರೆ ಮತ್ತು ಅದರ ನಕಲನ್ನು ಕೆ.ಜಿ.ಎಫ್ ಅಧೀಕ್ಷಕರಿಗೆ ಕೊಟ್ಟಿರುತ್ತಾರೆ. ನಾವು ಸದರಿ ದೂರಿನ ನಕಲನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ತಮಗೆ ಮೋಸ ಮಾಡಿ ಕರಾರುಪತ್ರವನ್ನು ಬರೆದುಕೊಂಡಿರುತ್ತಾರೆ ಎಂದು ನಮ್ಮ ತಂದೆಯು ಅಸಲು ದಾವಾ ನಂಬರ್ 760/1991 ರಲ್ಲಿ ವಾದಿಸಿದ್ದರು ಎಂದರೆ ಸರಿ. ನಿಪಿ 37 ಮತ್ತು 40 ದೂರುಗಳ ಆಧಾರದ ಮೇಲೆ ನಮ್ಮ ತಾಯಿಯು ಯಾವುದೇ ಖಾಸಗಿ ದೂರುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ, ನಮ್ಮ ತಂದೆ ತಾಯಿಯು ಯಾವುದೇ ದೂರುಗಳನ್ನು ನೀಡಿರುವುದದಿಲ್ಲ ಮತ್ತು ನಾವು ನಿಪಿ 37 ಮತ್ತು 40 ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಈಗ 2 ರಿಂದ 4 ಮತ್ತು 7 ನೇ ಪ್ರತಿವಾದಿಯರು ದಾವಾ ಸ್ವತ್ತುಗಳ ಸಂಪೂರ್ಣ ಮಾಲೀಕರು ಆಗಿದ್ದು ಅವುಗಳನ್ನು ಹೇಗಾದರೂ ಮಾಡಿ ಪಡೆದುಕೊಳ್ಳುವ ಉದ್ದೇಶದಿಂದ ನಾವು ಈ ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)

**1** ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ

ಕೆಜಿಎಫ್